(ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು, ಅದರ ಬಗ್ಗೆ ಈ ಪಾಲ್ ಪೋತನ್ ಅವರು ನಿಧನರಾಗಿರುವುದನ್ನು ನನ್ನ ಗಮನಕ್ಕೆ ಮಾನ್ಯ ಕೃಷಿ ಸಚಿವರು ತಂದರು ಇಂಥ ಸಂಪ್ರದಾಯ ಹಿಂದೆ ಆಗಿದೆಯೇ ಎಂದು ನನ್ನ ಕಾರ್ಯದರ್ಶಿಯ ಗಮನಕ್ಕೆ ತಂದಾಗ ಆಗಿದೆ ಎಂದು ಹೇಳಿದ ಮೇಲೆ ಆ ರೀತಿ ಆಗಿದ್ದರೆ ಇದನ್ನು ಹಾಕಿಕೊಳ್ಳಿ ಎಂದು ನಾನು ಹೇಳಿದೆ

ಶ್ರೀ ಬಿ ಎಸ್ ಯಡಿಯೂರಪ್ಪ ಸರ್ಕಾರವನ್ನು ಕೇಳಿ

ಅಧ್ಯಕ್ಷರು ಯಾವ ರೀತಿ ಏನು ಎಂದು ಸ್ಪಷ್ಟವಾಗಿ ಚರ್ಚೆ ಮಾಡಿ ಮುಂದೆ ಮಾಡೋಣ

ಶ್ರೀ ಬಿ ಎಸ್ ಯಡಿಯೂರಪ್ಪ ಚರ್ಚೆ ಬೇಡಿ ಗಮನಿಸೋಣ

ಅಧ್ಯಕ್ಷರು ಈಗ ಪ್ರಶ್ನೋತ್ತರ

2 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಬಗ್ಗೆ

106(682) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಸೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿರುವುದು,

ಅ) ಈಗಾಗಲೇ ಕೈಗೊಂಡಿರುವ ಅಪೂರ್ಣಗೊಂಡಿರುವ ರಸ್ತೆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು, (ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಲಸೂರು ಮತಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಆ) ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಹಾಲಿ ಪ್ರಗತಿಯಲ್ಲಿರುವ ಮದಗಟ್ಟಿ ಕ್ರಾಸ್‌ನಿಂದ ಗೊರ್ಟ ಮುಚಲಮ್ ಮಾರ್ಗ ಬಸವಕಲ್ಯಾಣ ರಸ್ತೆ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ (ಅಂದಾಜು ರೂ 100 ಲಕ್ಷ ಮತ್ತು ವೆಚ್ಚ ರೂ 50 00 ಲಕ್ಷಗಳು)

ಅನುಬಂಧ

ಕ್ರ ಸಂ	ರಸ್ತೆಯ ಹೆಸರು	ಉದ್ದ ಕಿಮೀ	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಭಾಲ್ಕಿ ಶಾಹಾಜಾನಿ ಔರದ ರಸ್ತೆಯ ಗೌಡರತೋಳಿ ಕ್ರಾಸ್‌ದಿಂದ ಹುಲಸೂರ ವರೆಗಿನ ಜಿಲ್ಲಾ ಮುಖ್ಯ ರಸ್ತೆ ಕಿಮೀ 16 70 ರಿಂದ 22.50 ರವರೆಗೆ ಸುಧಾರಣೆ ಕಾಮಗಾರಿ	5 80	65 00
2	ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಮದಕಟ್ಟಿ ಕ್ರಾಸ್‌ನಿಂದ ಗೊರ್ಟಾ ಮುಚಲಮ್ ಮಾರ್ಗ ಬಸವಕಲ್ಯಾಣ ರಸ್ತೆ ಅಭಿವೃದ್ಧಿ	8.00	100 00
3	ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಹುಮನಾಬಾದ್–ಬಾಲ್ಕಿ ರಸ್ತೆ ಅಭಿವೃದ್ಧಿ (ದಡಗಿ ಕ್ರಾಸ್, ಜಲಸಿಂಗಿ, ದುಬಲಗುಂಡಿ, ಕುಕ್, ಚಿಂಚೋಳಿ ಕ್ರಾಸ್, ಎಂಕೂರ್, ಖೆಲಗಿ ಕ್ರಾಸ್ ಮಾರ್ಗ)	13.80	150.00
4	ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಕಟ್ಟಿತುಂಗಾವ್ ಕ್ರಾಸ್‌ನಿಂದ ಹಂದಿಕೆರ ರಸ್ತೆ ಅಭಿವೃದ್ಧಿ (ಚಲಕಪುರ, ಜೆಟ್ಟ, ಕುಕ್, ಚಿಂಚೋಳಿ, ಸುಲ್ತಾನ್ ಬಡಮಾಡಿ ಮಾರ್ಗ)	21 00	250 00
	ಒಟ್ಟು	**48 60**	**565 00**
5	ನಬಾರ್ಡ್ ಆರ್ ಐ ಡಿ ಎಫ್ IX ರಡಿ ಧನ್ನೂರ (ಕೆ) ಘಾಟ ಬೋರಾಳ ರಸ್ತೆ ಅಭಿವೃದ್ಧಿ	10.00	95.00
6	ದುಬಲಗುಂಡಿ ಕೆವಾಡಿ ಕ್ರಾಸ್ ರಸ್ತೆ ಅಭಿವೃದ್ಧಿ	4.00	20.00
7	ಚಿಲಕಾಪುರ–ಹಳ್ಳಿಖೇಡ್ ರಸ್ತೆ ಅಭಿವೃದ್ಧಿ	3.00	20.00
8	ಮುರಂಬಿ–ಆರ್ ಗೌಡಗಾಂ ರಸ್ತೆ ಅಭಿವೃದ್ಧಿ	2.00	17.00
9	ಕುಮಾರ ಚಿಂಚೋಳಿ–ಹಂದಿಕೇರಾ ರಸ್ತೆ ಅಭಿವೃದ್ಧಿ	3.00	33.50
	ಒಟ್ಟು	22.00	185.50

ಶ್ರೀ ರಾಜೇಂದ್ರ ವರ್ಮ ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರತಕ್ಕದ್ದು ನಾಲ್ಕು ವರ್ಷಗಳ ಹಿಂದೆ ಮಂಜೂರಾಗಿರತಕ್ಕ ರಸ್ತೆಗಳ ಬಗ್ಗೆ ಉತ್ತರ ಕೊಟ್ಟಿದ್ದಾರೆ ಅವು ಇನ್ನೂ ಯಾವುದೂ ಅದರಲ್ಲಿ ಪ್ರಾರಂಭವಾಗಿಲ್ಲ

ಎರಡನೆಯದಾಗಿ ನನ್ನ ಕ್ಷೇತ್ರದಲ್ಲಿ ಒಟ್ಟು 80 ಕಿಲೋ ಮೀಟರ್ ರೋಡ್ ಆಗಬೇಕಾಗಿದೆ ಈ ರಸ್ತೆಗಳ ಮೇಲೆ ಅನೇಕ ಮಹಿಳೆಯರು, ಡೆಲಿವರಿ ಕೇಸಿಗಾಗಿ ಭಾಲ್ಕಿ, ಬಸವಕಲ್ಯಾಣ–ಹುಮ್ನಾಬಾದ್, ಗ್ರಾಮದಿಂದ ಬಸ್‌ನಲ್ಲಿ ಹೋಗಬೇಕಾಗಿದೆ ತಗ್ಗು ಮತ್ತು ಗುಂಡಿ ಇರತಕ್ಕ ಜಾಗಗಳಲ್ಲೂ ಬಸ್ ಜಂಪ್ ಆಗಿ ಹೋಗುವಂತಹ ಸಮಯದಲ್ಲಿ ಎಷ್ಟೋ ಹೆರಿಗೆಗೆ ಹೋಗತಕ್ಕ ಮಹಿಳೆಯರಿಗೆ ಬಿಪಿ ಹೈಯೆಸ್ಟ್ ಆಗಿ ಸತ್ತಿರುವಂತಹ ಉದಾಹರಣೆಗಳು ಇದ್ದಾವೆ ಜೊತೆಗೆ ನನ್ನ ಕ್ಷೇತ್ರದಲ್ಲಿ ಮಾನ್ಯ ಸಚಿವರು ಯಾವಾಗಲಾದರೂ ಪ್ರವಾಸ ಮಾಡಿದಂತಹ ಸಂದರ್ಭದೊಳಗೆ ಅನೇಕ ಸಾರಿ ಮಂತ್ರಿಗಳು ಸೊಂಟ ನೋವಿನಿಂದ ಪ್ರವಾಸಗಳನ್ನು ರದ್ದು ಮಾಡಿಕೊಂಡು ವಾಪಸ್ ಒಂದಂತಹ ಉದಾಹರಣೆ ಇದ್ದಾವೆ ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುವುದು ಏನೆಂದರೆ ಇವು ಅಂತರ ರಾಜ್ಯದ ರಸ್ತೆ ಆಗಿವೆ ಮಾವಿನಾಡಿ ಕ್ರಾಸ್‌ನಿಂದ ಹೊರವಟ್ಟಿ ಗ್ರಾಮದವರೆಗೆ ಅಂತರ ರಾಜ್ಯ ರಸ್ತೆ ಹೊರವಟ್ಟಿ ಅಂದರೆ ನಮ್ಮ ಮಾನ್ಯ ಖರ್ಗೆ ಸಾಹೇಬರು ಹುಟ್ಟಿದಂತಹ ಊರು ಆ ಗ್ರಾಮಕ್ಕೆ ಇಲ್ಲಿಯವರೆಗೆ ರೋಡ್ ಆಗಿಲ್ಲ ಜೊತೆಯಲ್ಲಿ ಮಾಣಿಕ್ ನಗರದಿಂದ ಖೋಡವಾಡಿವರೆಗೆ, ಹಳ್ಳಿಕೇಡ್ (ಬಿ) ಗ್ರಾಮದಿಂದ ಧೂಳುಗುಂಡಿ ಕ್ರಾಸ್‌ವರೆಗೆ, ಕೇಸಿಪ್ ಜೋಳದ ಕ್ರಾಸ್‌ನಿಂದ ಒಳಹಂಡಿ ಗ್ರಾಮದವರೆಗೆ, ಮಹಾರಾಷ್ಟ್ರದ ಗಡಿ ಭಾಗಕ್ಕೆ, ಒಟ್ಟು 80 ಕಿಲೋ ಮೀಟರ ರಸ್ತೆ ಆಗುವುದು ಬಾಕಿ ಉಳಿದಿದೆ ದಯವಿಟ್ಟು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಆ ಹುಲಸೂರು ಕ್ಷೇತ್ರ ಅತೀ ಹಿಂದುಳಿದಿರತಕ್ಕಂಥ ಪ್ರದೇಶ ಗಡಿ ಭಾಗದಲ್ಲಿ ಇರತಕ್ಕದ್ದು ಈ ಸರ್ಕಾರ ಬಂದು ಮೂರು ತಿಂಗಳಾಯಿತು ಇನ್ನು ಯಾವುದೇ ರಸ್ತೆ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮಾನ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ದಯವಿಟ್ಟು 80 ಕಿಲೋ ಮೀಟರ್ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು ಮತ್ತು ಹಣ ಮಂಜೂರು ಮಾಡಬೇಕೆಂದು ಕೇಳುತ್ತಿದ್ದೇನೆ

ಶ್ರೀ ಹೆಚ್ ಡಿ ರೇವಣ್ಣ (ಇಂಧನ ಮತ್ತು ಲೋಕೋಪಯೋಗಿ ಸಚಿವರು) ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರಲ್ಲಿ ಯಾವ ರಸ್ತೆ ಅತಿ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತೇನೆ ಅದರ ಜೊತೆಗೆ ಈಗಾಗಲೇ ರಾಜ್ಯವಲ್ಲಿ ಬರುವಂತಹ ಕೆಲವು ಎಂಡಿಆರ್ ರಸ್ತೆಗಳು ಇರಬಹುದು ಅಥವಾ ರಾಜ್ಯ ಹೆದ್ದಾರಿ ರಸ್ತೆ ಇರಬಹುದು ಈಗಾಗಲೇ ಗುಂಡಿ ಮುಚ್ಚುವಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದಕ್ಕೆ ಹಣವನ್ನೂ ಬಿಡುಗಡೆ ಮಾಡಿದ್ದೇವೆ

ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚರಿಸುವ ಬಸ್ಸುಗಳ ನಿಲುಗಡೆ

109 (476) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಬಸ್ ನಿಲ್ದಾಣಕ್ಕೆ ಬಾರದೇ ಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು,